ಆ) ವೆಂಕಟಾಪುರ ಕೆರೆ ದೊಡ್ಡದಾಗಿ ಇದ್ದು ನೀರಿನ ಶೇಖರಣೆಯೂ ಜಾಸ್ತಿ ಇದ್ದು ಆ ಕೆರೆಯ ಕಟ್ಟೆಯನ್ನು ಚೆನ್ನಾಗಿ ಅಗಲ ಮಾಡಿ ದುರಸ್ತಿ ಮಾಡದೆ ಇರುವುದರಿಂದ ಈ ತೊಂದರ ತಪ್ಪುವುದಿಲ್ಲ ಎಂಬ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ

ಇ) ಹಾಗಿದ್ದಲ್ಲಿ, ಸರ್ಕಾರ ಸೂಕ್ತ ಕ್ರಮ ಕೈಗೊಳ್ಳುವುದರ ಕುರಿತು ಏನು ಕ್ರಮ ಜರುಗಿಸಿದೆ ಎಂಬುದನ್ನು ತಿಳಿಸಲಾಗುವುದೇ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಮತ್ತು ಸಣ್ಣ ನೀರಾವರಿ ಸಚಿವರು)

ಅ) ವೆಂಕಟಾಪುರ ದೊಡ್ಡಕೆರೆಯು ನಾದುರಸ್ತಿಯಾಗಿರುವು ನಿಜವಾದರೂ ಕೆಲವು ದಿನಗಳ ಹಿಂದೆ ಬಿದ್ದ ಮಳೆಗೆ ಕೆರೆಕಟ್ಟೆ ಒಡೆದು ಹೋಗಿರುವುದಿಲ್ಲ ಆದುದರಿಂದ ರೈತರ ಬೆಳೆಯ ಮೇಲೆ ನೀರು ಹರಿದು ಯಾವುದೇ ನಷ್ಟ ಸಂಭವಿಸಿರುವುದಿಲ್ಲ

ಆ) ಹೌದು

ಇ) ದಿನಾಂಕ 29 09 2003 ಹಾಗೂ 30 09 2003 ರಂದು ಬಿದ್ದ ಭಾರಿ ಮಳೆಯಿಂದಾಗಿ ಈ ಕೆರೆಯು ತುಂಬಿ ಕೋಡಿ ಹರಿದಿದ್ದು ಹಾಗೂ ಬಹಳ ವರ್ಷಗಳಿಂದ ಈ ಕೆರೆಗೆ ನೀರು ಬಾರದೇ ಕೆರೆ ತುಂಬದ ಕಾರಣ ಏರಿಯಲ್ಲಿ ಕೆಲವು ಸಣ್ಣಪುಟ್ಟ ರಂಧ್ರಗಳು ಏರ್ಪಟ್ಟಿದ್ದು ಈ ರಂಧ್ರಗಳಲ್ಲಿ ನೀರು ಹರಿದು ರಂಧ್ರಗಳು ದೊಡ್ಡದಾಗಿ ಸೋರುವಿಕೆ ಕಂಡು ಬಂದಿರುತ್ತದೆ ತಾತ್ಕಲಿಕವಾಗಿ ತಡೆ ಏರಿಯನ್ನು ನಿರ್ಮಿಸಿ ಈ ಸೋರುವಿಕೆಯನ್ನು ತಡೆದಿದ್ದು ಈಗ ಈ ಕೆರೆಗೆ ಯಾವುದೇ ಅಪಾಯವಿರುವುದಿಲ್ಲ ಈಗ ಕೆರೆಯಲ್ಲಿ ನೀರು ಇರುವುದರಿಂದ ಶಾಶ್ವತವಾಗಿ ದುರಸ್ತಿಯನ್ನು ನೀರಿನ ಮಟ್ಟ ಇಳಿದ ನಂತರ ಪರಿಶೀಲಿಸಲಾಗುವುದು

ಹುಬ್ಬಳ್ಳಿ ಧಾರವಾಡ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ತೊಂದರೆ ಬಗ್ಗೆ

28 (173) ಶ್ರೀ ಹೊನ್ನಳ್ಳಿ ಜಬ್ಬಾರ್ ಖಾನ್ ಹೈಯತ್ ಖಾನ್ (ಹುಬ್ಬಳ್ಳಿ) ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಹುಬ್ಬಳ್ಳಿ ಧಾರವಾಡ ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿ ವಾಸಿಸುತ್ತಿರುವ ನಾಗರೀಕರಿಗೆ ಕುಡಿಯುವ ನೀರಿನ ತೊಂದರೆ ಇರುವುದು ಸರ್ಕಾರದ ಗಮನಕ್ಕ ಬಂದಿದೆಯೇ

ಆ) ಮಲಪ್ರಭಾ ಕುಡಿಯುವ ನೀರಿನ 3ನೇ ಹಂತದ ಯೋಜನೆ ಯಾವ ಹಂತದಲ್ಲಿದೆ

ಇ) ಈ ಯೋಜನೆ ಕೈಗೆತ್ತಿಕೊಳ್ಳಲು ವಿಳಂಬವಾಗುತ್ತಿರುವ ಕಾರಣಗಳೇನು?

ಶ್ರೀ ಎಸ್ ಎಂ ಕೃಷ್ಣ (ಮುಖ್ಯಮಂತ್ರಿಯವರು)

ಅ) ಅವಳಿ ನಗರಕ್ಕ 2 ಮುಖ್ಯ ನೀರಿನ ಮೂಲಗಳಲ್ಲಿ ಒಂದಾದ ನೀರಸಾಗರ ಜಲಾಶಯವು ಸತತ ಮೂರು ವರ್ಷಗಳ ಬರಗಾಲದಿಂದ ಪೂರ್ಣವಾಗಿ ಒತ್ತಿ ಹೋಗಿರುವುದರಿಂದ ಕುಡಿಯುವ ನೀರಿನ ಸಮಸ್ಯೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ

ಆ) ಹುಬ್ಬಳ್ಳಿ ಧಾರವಾಡ ನಗರಕ್ಕೆ ಮಲಪ್ರಭಾ ಜಲಾಶಯದಿಂದ ನೀರ ಒದಗಿಸುವ 3ನೇ ಹಂತದ ರೂ 144 00 ಕೋಟಿಗಳ ಯೋಜನೆಯ ಪರಿಶೀಲನೆಯಲ್ಲಿದೆ

ಇ) ಪರೀಶೀಲನೆಯಲ್ಲಿದೆ